# ಸಂಕ್ರಾಂತಿ ಕುಡಿಕೆಗಳು

ಸಂಕ್ರಾಂತಿಯ ಸಂದರ್ಭದಲ್ಲಿ ಎಳ್ಳಿನ ಜತೆ ಬೆಲ್ಲ, ಕಡಲೇಬೀಜ, ಕಡಲೆ ಇತ್ಯಾದಿ ಬೆರೆಸಿ, ಅದರ ಜತೆಗೆ ಸಕ್ಕರೆ ಅಚ್ಚು, ಕಬ್ಬು, ಹಣ್ಣುಗಳು ಇತ್ಯಾದಿ ಪದಾರ್ಥಗಳನ್ನು ಮನೆಮನೆಗೆ ಹೋಗಿ ಬೀರುವುದು ನಮ್ಮ ಸಂಪ್ರದಾಯ. ಕೆಲವು ಕಡೆ ಸಣ್ಣ ಸಣ್ಣ ಕುಡಿಕೆಗಳಲ್ಲಿ ಭತ್ತ ಹಾಗೂ ಅವರೆಕಾಯಿಯನ್ನು ಹಾಕಿ ಕೊಡುವ ಪದ್ಧತಿಯಿದೆ. ಇದು ಅವರೆಕಾಯಿಯ ಕಾಲವಾದ್ದರಿಂದ ಮತ್ತು ಭತ್ತದ ಹೊಸ ಪೈರು ಬಂದಿರುವುದರಿಂದ ತಾವು ಬೆಳೆದದ್ದನ್ನು ಇತರರಿಗೂ ಹಂಚುವ ಸದಾಶಯವಿದ್ದೀತು. ಹಿಂದೆಲ್ಲಾ ಮೊರ, ಕುಕ್ಕೆಗಳಲ್ಲಿ ಕೊಡುತ್ತಿದ್ದರೇನೋ! ಕಾಲ ಕಳೆದಂತೆ ಇದು ಸಾಂಕೇತಿಕವಾಗಿ, ಕುಡಿಕೆಗಳಲ್ಲಿ ಹಾಕಿ ಕೊಡುವ ಸಂಪ್ರದಾಯವಾಗಿ ಉಳಿದು ಬಂದಿರಬಹುದು! ಕುಡಿಕೆಗಳಿಗೆ ಬಣ್ಣ ಬಳಿದು, ಬೇರೆ ಬೇರೆ ರೀತಿಯ ಅಲಂಕಾರ ಮಾಡುವುದೂ ಉಂಟು.

**-ಬಿ ಎಸ್ ರಾಜಲಕ್ಷ್ಮಿ, ಹಾಸನ**





# ಮರದ ಪಾದುಕೆ

ಇತ್ತೀಚೆಗೆ ಮಹಾರಾಷ್ಟ್ರದ ರತ್ನಗಿರಿಗೆ ಭೇಟಿಯಿತ್ತಾಗ ಪ್ರಹಲ್ಲಾದ್ ಘಡ್ಸೆಯವರ ಮನೆಯಲ್ಲಿನ ಹಳೆಯ ವಸ್ತುಗಳನ್ನು ನೋಡುವ ಅವಕಾಶ ಒದಗಿ ಬಂದಿತ್ತು. ಅವುಗಳಲ್ಲಿ ಗಮನ ಸೆಳೆದದ್ದು ಈ ಮರದ ಪಾದುಕೆಗಳು. ಅತ್ಯಾಕರ್ಷಕ ಚಿತ್ತಾರಗಳನ್ನೊಳಗೊಂಡಿರುವ ಪಾದುಕೆಗಳು ಅವರ ಮನೆಯಲ್ಲಿ ಹೇಗೆ ಬಂದವೋ ಅವರಿಗೂ ಗೊತ್ತಿಲ್ಲವಂತೆ! ಅವರ ಮನೆಯಲ್ಲಾರೂ ಸನ್ಯಾಸಿಗಳಾಗಿಲ್ಲ, ಸ್ವಾಮಿಗಳಾಗಿಲ್ಲ. ಅದನ್ನಾರು ಉಪಯೋಗಿಸಿದ್ದರೆಂಬುದೂ ಅವರಿಗೆ ಗೊತ್ತಿಲ್ಲವಂತೆ. ಅತೀ ಪುರಾತನವಾದ ಪಾದುಕೆಗೆ ಎಷ್ಟು ವಯಸ್ಸಾಗಿದೆ ಎನ್ನುವುದನ್ನು ಅರಿಯಲು ಕಾರ್ಬನ್ ಡೇಟಿಂಗ್ ಮಾಡಬೇಕೇನೋ!

**– ಡಾ.ಮನೋಜ ಗೋಡಬೋಲೆ, ಉಜಿರೆ**

# ತುಳು ಕ್ಯಾಲೆಂಡರ್ 'ಕಾಲಕೊಂಡೆ'

ತುಳು ಭಾಷಾಭಿಮಾನದ ಪ್ರತೀಕವಾಗಿ ಈ ವರ್ಷ ತುಳು ಕ್ಯಾಲೆಂಡರ್ 'ತುಳುವೆರೆನ ಕಾಲಕೊಂಡೆ–2018' ಎಂಬ ಹೆಸರಿನಲ್ಲಿ ಪ್ರಕಟವಾಗಿದೆ. ಬಹುತೇಕವಾಗಿ ತುಳು ಭಾಷೆಯ ಲಿಪಿಯನ್ನೇ ಬಳಸಿಕೊಂಡಿರುವ ಈ ಕ್ಯಾಲೆಂಡರಿನಲ್ಲಿ ತುಳು ಲಿಪಿಯ ಸಂಖ್ಯೆಗಳನ್ನೇ ಬಳಸಲಾಗಿದೆ. ವೀಕ್ಷಕರ ಅನುಕೂಲಕ್ಕಾಗಿ ಸಣ್ಣದಾಗಿ ಆಂಗ್ಲ ಸಂಖ್ಯೆಗಳನ್ನು ಉಪಯೋಗಿಸಲಾಗಿದೆ. ಮಂಗಳೂರಿನ ತುಳುನಾಡ್ ಟ್ರಸ್ಟ್ ರಚಿಸಿರುವ ಈ ಕ್ಯಾಲೆಂಡರಿನಲ್ಲಿ ವಾರದ ಹೆಸರುಗಳನ್ನು ತುಳು ಲಿಪಿಯಲ್ಲಿ ಬರೆಯಲಾಗಿದೆ. ಕ್ಯಾಲೆಂಡರಿನಲ್ಲಿ ತುಳುವಿನಲ್ಲಿ ಕಂಡುಬರುವ ಐತ್ತಾರ, ಸೋಮಾರ, ಅಂಗಾರೆ... ವಾರದ ಹೆಸರುಗಳು, ತುಳು ಭಾಷೆಯ ತಿಂಗಳ ಹೆಸರುಗಳು, ಸಂಕ್ರಾಂತಿ, ಅಮಾವಾಸ್ಯೆಗಳ ದಾಖಲಾತಿಗಳು ಸುಂದರವಾಗಿದ್ದು, ತುಳುವರ ಮನಗೆಲ್ಲುವುದು ನಿಶ್ಚಿತ. ತುಳು ಭಾಷೆಯ ಅನೇಕ ಶಬ್ದಗಳು ಬಳಕೆಯಿಂದ ದೂರ ಸರಿಯುತ್ತಿರುವಾಗ ಈ ಪ್ರಯೋಗ ಬಹಳಷ್ಟು ನಿರೀಕ್ಷೆ ಮೂಡಿಸಿದೆ.

ಈ ಕ್ಯಾಲೆಂಡರಿನಲ್ಲಿ ತುಳು ಲಿಪಿಯನ್ನು ಕಲಿಯುವ ಆಸಕ್ತರಿಗೆ ಸ್ವರಗಳು, ವ್ಯಂಜನಗಳು, ಇತರ ಅಕ್ಷರಗಳು, ಲೇಖನ ಚಿಹ್ನೆಗಳು, ಅಕ್ಷರದ ಬಳಕೆಯ ವಿಧಾನಗಳನ್ನು ವಿವರವಾಗಿ ನೀಡಲಾಗಿದೆ. ಜತೆಯಲ್ಲೇ ಹಿರಿಯ ತುಳು ಸಾಹಿತಿಗಳಾದ ಡಾ. ನಾಡೋಜ ಕಯ್ಯಾರ ಕಿಂಞಣ್ಣ ರೈ, ಡಾ. ವೆಂಕಟರಾಜ ಪುಣಿಂಚಿತ್ತಾಯ ಅವರ ಕವನದ ಸಾಲುಗಳು, ತುಳುವಿನ ಜಾನಪದ ಪಾಡ್ದನಗಳಿಂದ ಆಯ್ದ ನುಡಿಗಳನ್ನು ಪ್ರಕಟಿಸಲಾಗಿದೆ. ಸಂಪರ್ಕಕ್ಕೆ 9964669218.

**– ಪ್ರಶಾಂತ ರಾಜ ವಿ.ಟಿ., ಅಡೂರು**

